# 2 ನೇ ಹೆಚ್ಚುವರಿ ಸಿವಿಲ್  ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ

ಸಿ ಸಿ  ನಂ. 1005/2021

| | | |
|---|---|---|
| ಹೆಸರು | ಗಿರೀಶ್ ಎಚ್ ಓ | PW 1 |
| ತಂದೆಯ ಹೆಸರು | ಓಂಕಾರಪ್ಪ | CW 3 |
| ವಯಸ್ಸು | 37 | |
| ಉದ್ಯೋಗ | ಚಾಲಕ | ದಿನಾಂಕ  07.12.2022 |
| ವಾಸ | ಹೊಸದುರ್ಗ | |

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ನನಗೆ ಚಾಸಾ.1 ಗೊತ್ತು, ಆರೋಪಿತರು ನನಗೆ ಪರಿಚಯವಿಲ್ಲ. ಸದರಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಗೆ ಒಂದು ಸ್ಥಳ ಪಂಚನಾಮೆಗೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.1 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಪೋಟೊವನ್ನು ತೋರಿಸಲಾಗಿ, ಅದರಲ್ಲಿ ತಾನು ಇರುವುದಾಗಿ ಒಪ್ಪಿಕೊಂಡಿದ್ದ, ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಮಲೆಬೆನ್ನೂರು ಪೋಲಿಸ್ ಠಾಣೆಗೆ ಹೋದಾಗ ಪೋಲಿಸರು ಹೇಳಿದ ಮೇರೆಗೆ ಸಹಿ ಮಾಡಿರುತ್ತೇನೆ. ಠಾಣೆಯಿಂದ ನನ್ನ ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿರುವುದಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ.  ನಿಪಿ.1 ರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ. ನಿಪಿ.2 ನ್ನು ಠಾಣೆಯ ಹತ್ತಿರ ತೆಗೆದಿರುತ್ತಾರೆ. ಸಾಕ್ಷಿಯು ಒಂದು ಪೋಲಿಸ್ ನೋಟಿಸ್ ನಲ್ಲಿ ತನ್ನ ಸಹಿ ಯನ್ನು ನೋಡಿ ಗುರುತಿಸಿದ್ದು, ಸದರಿ ಪೋಲಿಸ್ ನೋಟಿಸ್ ನ್ನು ನಿಪಿ.3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಿಪಿ.2 ಸಮಯದಲ್ಲಿ ಸಹಿ ಹಾಕಿರುತ್ತೇನೆ. ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಪೋಲಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಸಾಕ್ಷಿಯನ್ನು  ಪ್ರತಿಕೂಲ ಸಾಕ್ಷಿ ಎಂದು ಪರಿಗಣಸಲು ಮಾನ್ಯ ಎ.ಪಿ.ಪಿ ಯವರು ಕೋರಿದ್ದು, ಸಂಗತಿಗಳನ್ನು ಪರೀಶಿಲಿಸಲಾಗಿ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರಿಗೆ ಪಾಟಿ ಸವಾಲು ಮಾಡಲು ಅನುಮತಿಸಲಾಯಿತು)

**ಪಾಟಿಸವಾಲು ಶ್ರೀ ಎ.ಪಿ.ಪಿ. ಯವರಿಂದಃ**

ದಿನಾಂಕ  20.12.2020 ರಂದು ಹೊಳೆಸಿರಿಗೆರೆ ಗ್ರಾಮದ ರೇಣುಕೇಶ್ವರ ರವರ ಮನೆಯ ಮುಂಭಾಗ ಪಂಚನಾಮೆಗೆ ಸಹಕರಿಸುವಂತೆ ನಿಪಿ.3 ರಂತೆ ನೋಟಿಸ್ ನೀಡಿದ್ದರು ಎಂದರೆ ಸರಿಯಲ್ಲ. ನಾನು ಒಪ್ಪಿದ ಮೇರೆಗೆ ಅದೇ ದಿನ ಮಧ್ಯಾಹ್ನ 2.30 ರಿಂದ 3.00 ಗಂಟೆ ಸಮಯದಲ್ಲಿ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ನನ್ನ ಮತ್ತು ಚಾಸಾ.2 ರವರು ಸಮಕ್ಷಮ ನಿಪಿ.1 ರಂತೆ ಪಂಚನಾಮೆ ಬರೆದಾಗ,  ವಿಚಾರ ತಿಳಿದು ಪಂಚನಾಮೆಗೆ ಸಹಕರಿಸಿ,

ನಿಪಿ.1 ಕ್ಕೆ ಸ್ಥಳದಲ್ಲೆ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಿಪಿ.2 ರಂತೆ ಪೊಟೊ ತೆಗೆದಿದ್ದರು ಎಂದರೆ ಸರಿಯಲ್ಲ.

ದಿನಾಂಕ 27.01.2021 ರಂದು ಪೋಲಿಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಿಲ್ಲ. ನನ್ನ ಹೇಳಿಕೆಯಲ್ಲಿ ನನ್ನ ಹೆಂಡತಿಯಾದ . . . . ಸಹಿ ಮಾಡಿರುತ್ತೇನೆ ಅಂತ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆ ಭಾಗವನ್ನು ನಿಪಿ.4 ಎಂದು ಗುರುತಿಸಲಾಯಿತು.

1 ನೇ ಆರೋಪಿ ಮತ್ತು ನಾವು ಸಂಬಂಧಿಕರು ಎಂದರೆ ಸರಿ. ಆ ಕಾರಣ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲುಃ ಆರೋಪಿ ಪರ ವಕೀಲರಿಂದ ಃ ಇರುವುದಿಲ್ಲ.**

ಮರುವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮಎಫ್ ಸಿ ನ್ಯಾಯಾಲಯ,ಹರಿಹರ.